# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೦೯, ಏಪ್ರಿಲ್, ೨೦೨೧ (ಚೈತ್ರ, ೧೯, ಶಕವರ್ಷ, ೧೯೪೩)<br>BENGALURU, FRIDAY, 09, APRIL, 2021 (CHAITHRA, 19, SHAKAVARSHA, 1943) | ನಂ. ೪೨೮<br>No. 428 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 26 ಸೇಅನೇ 2018

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 09.04.2021

## ಅಧಿಸೂಚನೆ

ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ:02.02.2021 ರ ಅಧಿಸೂಚನೆ ಸಂಖ್ಯೆ: ಸಿಆಸುಇ 26 ಸೇಅನೇ 2018 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಅಹ್ವಾನಿಸಿ ದಿನಾಂಕ:02.02.2021 ರ ಕರ್ನಾಟಕ ರಾಜ್ಯಪತ್ರದ ಭಾಗ IV-ಎ ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ 14) ರ 3ನೇ ಪ್ರಕರಣದ (2) ನೇ ಉಪ ಪ್ರಕರಣದ (ಎ) ಖಂಡವನ್ನು ಪ್ರಕರಣ 8 ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ ;

ಸದರಿ ರಾಜ್ಯಪತ್ರವನ್ನು ದಿನಾಂಕ:02.02.2021 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗಿದ್ದು ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ :

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ, 14) ರ 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ ) (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಇವು ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 2 ರ ತಿದ್ದುಪಡಿ.-** (1) ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) 2ನೇ ನಿಯಮದಲ್ಲಿನ, (1) ನೇ ಉಪ ನಿಯಮದಲ್ಲಿ,-

(1) (ಎ) ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(ಎ) "ಮೃತ ಸರ್ಕಾರಿ ನೌಕರನ ಅವಲಂಬಿತ" ಎಂದರೆ, ಮೃತ ಸರ್ಕಾರಿ ನೌಕರನೊಂದಿಗೆ ವಾಸವಾಗಿದ್ದ ಮತ್ತು ಆತನಿಗೆ ಅವಲಂಬಿತರಾಗಿದ್ದ ಮತ್ತು 4 ನೇ ನಿಯಮದ (1)ನೇ ಉಪನಿಯಮದ ವಿವರಣೆಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವ ಆತನ ಕುಟುಂಬದ ಸದಸ್ಯರು.

(2) (ಬಿ) ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(ಬಿ) ಈ ನಿಯಮಗಳ ಉದ್ದೇಶಕ್ಕಾಗಿ "ಕುಟುಂಬ" ಎಂದರೆ.-

(i) ಮೃತ ಪುರುಷ ವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ವಿಧವಾ ಪತ್ನಿ, ಮಗ ಮತ್ತು ಮಗಳು (ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ ವಿಧವೆ);

(ii) ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಮಗ, ಮಗಳು (ಅವಿವಾಹಿತೆ/ವಿವಾಹಿತೆ/ವಿಚ್ಛೇದಿತೆ/ವಿಧವೆ) ಮತ್ತು ವಿಧುರ ಪತಿ;

(iii) ಮೃತ ಪುರುಷ ಅವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ, ಆತನ ಮೇಲೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ಸಹೋದರ ಅಥವಾ ಸಹೋದರಿ ;

(iv) ಮೃತ ಮಹಿಳಾ ಅವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ, ಆಕೆಯ ಮೇಲೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ಸಹೋದರ ಅಥವಾ ಸಹೋದರಿ

(v) ಮೃತ ವಿವಾಹಿತ ಸರ್ಕಾರಿ ನೌಕರನ/ಳ ಪತ್ನಿ/ಪತಿ ಈಗಾಗಲೇ ನಿಧನರಾಗಿದ್ದು ಮತ್ತು ಆತ/ಆಕೆಯ ಅಪ್ರಾಪ್ತ ವಯಸ್ಕ ಮಕ್ಕಳಿದ್ದಾಗ ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಅವರೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು;

**3. ನಿಯಮ 3 ರ ತಿದ್ದುಪಡಿ .-** ಸದರಿ ನಿಯಮಗಳ ನಿಯಮ 3 ರಲ್ಲಿ,-

(i) (2) ನೇ ಉಪ ನಿಯಮದಲ್ಲಿ,-

(1) (i) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(i) ಮೃತ ಪುರುಷ ವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ,-

(ಎ) ವಿಧವಾ ಪತ್ನಿ; ಮತ್ತು

(ಬಿ) ಮೃತನ ವಿಧವಾ ಪತ್ನಿಯು ನೇಮಕಾತಿಗಾಗಿ ಅರ್ಹಳಿಲ್ಲದಿದ್ದಲ್ಲಿ ಅಥವಾ ಸಮುಚಿತ ಕಾರಣಕ್ಕಾಗಿ ಅವಳು ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಮೃತ ಸರ್ಕಾರಿ ನೌಕರನ ವಿಧವಾ ಪತ್ನಿಯು ಆಯ್ಕೆ ಮಾಡಿದ ಆತನ ಮಗ ಅಥವಾ ಮಗಳು.

ಟಿಪ್ಪಣಿ: ಮೃತ ಸರ್ಕಾರಿ ನೌಕರನ ಪತ್ನಿಯು ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(2) (iಎ) ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

(iಎ) ಮೃತ ಪುರುಷ ಅವಿವಾಹಿತ ಸರ್ಕಾರಿ ನೌಕರನ ಸಂದರ್ಭದಲ್ಲಿ ಆತನಿಗೆ ಅವಲಂಬಿತರಾಗಿದ್ದ ಮತ್ತು ಆತನೊಂದಿಗೆ ವಾಸವಾಗಿದ್ದ ಆತನ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆತನ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ;

ಟಿಪ್ಪಣಿ: ಮೃತ ಸರ್ಕಾರಿ ನೌಕರನ ತಂದೆ/ತಾಯಿ ಆತನಿಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(3) (ii) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(ii) ಮೃತ ಮಹಿಳಾ ವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ,-

(ಎ) ಮೃತ ಸರ್ಕಾರಿ ನೌಕರಳ ವಿಧುರ ಪತಿಯು ಆಯ್ಕೆ ಮಾಡಿದ ಮಗ ಅಥವಾ ಮಗಳು ಮತ್ತು;

(ಬಿ) ಮಗ ಅಥವಾ ಮಗಳು ಅರ್ಹರಿಲ್ಲದಿದ್ದಲ್ಲಿ ಅಥವಾ ಯಾವುದೇ ಸಮುಚಿತ ಕಾರಣಕ್ಕಾಗಿ ನೇಮಕಾತಿಯನ್ನು ಒಪ್ಪದಿದ್ದಲ್ಲಿ, ಆಕೆಯ ವಿಧುರ ಪತಿ;

ಟಿಪ್ಪಣಿ: ಮೃತ ಸರ್ಕಾರಿ ನೌಕರಳ ಪತಿಯು ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಮಕ್ಕಳ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(4) (iiಎ) ನೇ ಖಂಡದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

(iiಎ) ಮೃತ ಮಹಿಳಾ ಅವಿವಾಹಿತ ಸರ್ಕಾರಿ ನೌಕರಳ ಸಂದರ್ಭದಲ್ಲಿ ಆಕೆಗೆ ಅವಲಂಬಿತರಾಗಿದ್ದ ಮತ್ತು ಆಕೆಯೊಂದಿಗೆ ವಾಸವಾಗಿದ್ದ ಆಕೆಯ ತಂದೆ ಅಥವಾ ತಾಯಿಯು ಆಯ್ಕೆ ಮಾಡಿದ ಅಥವಾ ಅವರ ಆಯ್ಕೆಯಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ, ಆಕೆಯ ತಾಯಿಯು ಆಯ್ಕೆ ಮಾಡಿದ ಸಹೋದರ ಅಥವಾ ಸಹೋದರಿ;

ಟಿಪ್ಪಣಿ: ಮೃತ ಸರ್ಕಾರಿ ನೌಕರಳ ತಂದೆ/ತಾಯಿ ಆಕೆಗೂ ಮೊದಲೇ ಮೃತಪಟ್ಟಿದ್ದಲ್ಲಿ, ಸಹೋದರ/ಸಹೋದರಿಯ ವಯಸ್ಸಿಗನುಗುಣವಾಗಿ ಆದ್ಯತೆಯನ್ನು ನೀಡತಕ್ಕದ್ದು.

(5) (iiಎ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು,

(iii) ಮೃತ ವಿವಾಹಿತ ಸರ್ಕಾರಿ ನೌಕರನ/ಳ ಪತ್ನಿ/ಪತಿ ಈಗಾಗಲೇ ಮೃತಪಟ್ಟಿದ್ದು ಮತ್ತು ಅವರಿಗೆ ಅಪ್ರಾಪ್ತ ವಯಸ್ಕ ಮಕ್ಕಳಿದ್ದ ಸಂದರ್ಭದಲ್ಲಿ, ಸಂಬಂಧಿತ ಕಾನೂನಿನ ಉಪಬಂಧಗಳನ್ವಯ ಆ ಮಕ್ಕಳೊಂದಿಗೆ ವಾಸಿಸುವ ಹಾಗೂ ಅವರನ್ನು ಪೋಷಿಸುವ ಪ್ರಮಾಣೀಕೃತ ಪೋಷಕರು.

(ii) ಉಪ ನಿಯಮ (3) ನ್ನು ಕೈಬಿಡಲಾಗಿದೆ.

**4. ನಿಯಮ 3ಎ ನ್ನು ರದ್ದುಗೊಳಿಸುವಿಕೆ.-** ಸದರಿ ನಿಯಮಗಳ ನಿಯಮ 3ಎ ನ್ನು ರದ್ದುಗೊಳಿಸಲಾಗಿದೆ.

**5. ನಿಯಮ 4ರ ತಿದ್ದುಪಡಿ.**- ಸದರಿ ನಿಯಮಗಳ ನಿಯಮ 4 ರಲ್ಲಿ,-

(1) (1) ನೇ ಉಪನಿಯಮದಲ್ಲಿ, 'ವಿವರಣೆ' ಯ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, (1)ನೇ ಉಪನಿಯಮದಲ್ಲಿ ಏನೇ ಇದ್ದರೂ, ಅದು ಗ್ರೂಪ್-ಸಿ ಮತ್ತು ಡಿ ಗೆ ಸೇರಿದ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕದ್ದಲ್ಲ."

(2) (2)ನೇ ಉಪ ನಿಯಮದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಕೋರುವ ಮೃತ ಸರ್ಕಾರಿ ನೌಕರನ/ಳ ವಿಧವಾ ಪತ್ನಿ ಅಥವಾ ವಿಧುರ ಪತಿಗೆ ಈ ಮೇಲೆ ನಿರ್ದಿಷ್ಟಪಡಿಸಿರುವ ವಯೋಮಿತಿಯು ಅನ್ವಯವಾಗತಕ್ಕದಲ್ಲ. ಈ ಅವಲಂಬಿತರ ವಯೋಮಿತಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಐವತ್ತೈದು ವರ್ಷಗಳನ್ನು ಮೀರತಕ್ಕದ್ದಲ್ಲ.

**6. ನಿಯಮ 5ರ ಪ್ರತ್ಯಾಯೋಜನೆ**:- ಸದರಿ ನಿಯಮಗಳ ನಿಯಮ 5 ರ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"**5. ನೇಮಕಾತಿಗಾಗಿ ಅರ್ಜಿ.**- ಈ ನಿಯಮಗಳ ಮೇರೆಗೆ ನೇಮಕಾತಿಯನ್ನು ಕೋರುವ ಪ್ರತಿಯೊಬ್ಬ ಮೃತ ಸರ್ಕಾರಿ ನೌಕರನ/ಳ ಅವಲಂಬಿತನು, ಸರ್ಕಾರಿ ನೌಕರನು/ಳು ಮರಣ ಹೊಂದಿದ ದಿನಾಂಕದಿಂದ ಒಂದು ವರ್ಷದ ಒಳಗೆ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂತಹ ನಮೂನೆಯಲ್ಲಿ ಮೃತ ಸರ್ಕಾರಿ ನೌಕರನು/ಳು ಕಾರ್ಯನಿರ್ವಹಿಸುತ್ತಿದ್ದ ಇಲಾಖಾ ಮುಖ್ಯಸ್ಥರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಪರಂತು, ಅಪ್ರಾಪ್ತ ವಯಸ್ಕರಾದ ಸಂದರ್ಭದಲ್ಲಿ, ಸರ್ಕಾರಿ ನೌಕರನು/ಳು ಮರಣ ಹೊಂದಿದ ದಿನಾಂಕದಿಂದ ಎರಡು ವರ್ಷಗಳ ಒಳಗೆ ಹದಿನೆಂಟು ವರ್ಷಗಳನ್ನು ಪೂರೈಸಿರತಕ್ಕದ್ದು ಮತ್ತು ತದನಂತರ ಎರಡು ವರ್ಷಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು."

**7. ನಿಯಮ 6ರ ತಿದ್ದುಪಡಿ.**- ಸದರಿ ನಿಯಮಗಳ ನಿಯಮ 6 ರಲ್ಲಿ ಉಪನಿಯಮ (6) ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(7) ಈ ನಿಯಮಗಳ ಅಡಿಯಲ್ಲಿ ನೇಮಕಾತಿಯನ್ನು ಅರ್ಜಿ ಸಲ್ಲಿಸಿದ ದಿನಾಂಕದಂದು ಚಾಲ್ತಿಯಲ್ಲಿರುವ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ತೇಜಾವತಿ. ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-ವಿಶೇಷ ಕೋಶ)

## GOVERNMENT OF KARNATAKA

No. DPAR 26 SCA 2018

Karnataka Government Secretariat,
Vidhana Soudha,
Bengaluru, dated: 09.04.2021

## NOTIFICATION

Whereas the draft of the following rules further to amend the Karnataka Civil Services (Appointment on Compassionate Grounds) (Amendment) Rules, 1996 was published as required by clause (a) of sub-section (2) of Section 3 read with Section 8 of the Karnataka State Civil Services Act, 1978 (Karnataka Act 14 of 1990) in Notification No. DPAR 26 SCA 2018 dated: 02.02.2021 in Part IV-A of the Karnataka Gazette Extraordinary dated: 02.02.2021 inviting objections and suggestions from all persons likely to be affected thereby within fifteen days from the date of publication of the draft in the Official Gazette.

Whereas, the said Gazette was made available to the public on 02.02.2021.

And whereas the objections and suggestions received have been considered by the State Government.

Now, therefore, in exercise of the powers conferred by sub-section (1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules, namely;

**RULES**

**1. Title and Commencement.-** (1) These rules may be called the Karnataka Civil Services (Appointment on Compassionate Grounds) (Amendment) Rules, 2021.

(2) They shall come into force from the date of their final publication in the Official Gazette.

**2. Amendment of Rule 2.-** In the Karnataka Civil Services (Appointment on Compassionate Grounds) Rules, 1996 (hereinafter referred to as the said rules), in Rule 2, in sub-rule (1),

(1) for clause (a), the following shall be substituted, namely:-

"(a) "dependent of a deceased Government Servant" means a member of the family of the deceased Government Servant who was living with and dependent on the deceased Government Servant and who fulfils the conditions specified in the explanation to sub-rule (1) of rule 4."

(2) for clause (b), the following shall be substituted, namely :-

"(b) "family" for the purpose of these rules,-

(i) in the case of the deceased male married Government Servant, his widow, son and daughter (unmarried/married/divorced/widowed) who were dependent upon him and were living with him;

(ii) in the case of the deceased female married Government Servant her son, daughter (unmarried/married/divorced/widowed) and widower who were dependent upon her and were living with her;

(iii) in the case of the deceased male unmarried Government Servant, his brother or sister who were dependent upon him and were living with him;

(iv) in the case of the deceased female unmarried Government Servant, her brother or sister who were dependent upon her and were living with her; and

(v) in the case of the deceased married Government Servant whose spouse is also no more and who has minor children, the certified guardian of the minor children who is living with them and takes care of the minor children as per the provisions of relevant law.

**3. Amendment of Rule 3.-** In Rule 3 of the said Rules, -

(i) in sub-rule (2),-

(1) for clause (i), the following shall be substituted, namely: -

"(i) in the case of the deceased male married Government Servant, -

(a) the widow; and

(b) son or daughter who is chosen by the widow of the deceased Government Servant, if the widow is not eligible or for any valid reason she is not willing to accept the appointment".

who were dependent on him and were living with him.

Note: In case spouse is pre-deceased then preference shall be given in the order of age of children.

(2) for clause (ia), the following shall be substituted, namely: -

"(ia) in the case of the deceased male unmarried Government Servant, his brother or sister, who is chosen by father and mother or in case of difference in their opinion, chosen by mother, who were dependent upon him and were living with him".

Note: In case parents are pre-deceased then preference shall be given in the order of age of brother/sister.

(3) for clause (ii), the following shall be substituted, namely: -

"(ii) in the case of the deceased female married Government Servant ;

(a) son or daughter who is chosen by the widower of the deceased Government Servant; and

(b) widower; if the son or daughter are not eligible or for any valid reason they are not willing to accept the appointment".

who were dependent on her and were living with her.

Note: In case spouse is pre-deceased then preference shall be given in the order of age of children.

(4) for clause (iia), the following shall be substituted, namely: -

"(iia) in the case of the deceased female unmarried Government Servant, her brother or sister, who is chosen by father and mother or in case of difference in their opinion, chosen by mother, who were dependent upon her and were living with her".

Note: In case parents are pre-deceased then preference shall be given in the order of age of brother/sister.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(5) after clause (iia), the following clause shall be inserted,

"(iii) in the case of deceased married Government Servant whose spouse is also no more and who has minor children, certified guardian of the minor children who is living with them and takes care of the minor children as per the provisions of relevant law.

(ii) sub-rule (3) shall be omitted.

**4. Omission of Rule 3A: -** Rule 3A of the said Rules shall be omitted.

**5. Amendment of Rule 4.-** In Rule 4 of the said Rules, -

(1) in sub-rule (1), after 'explanation' the following proviso shall be inserted, namely:-

"Provided that, nothing in sub-rule (1), shall apply to Government Servants belonging to Group-C and D."

(2) after sub-rule (2), the following proviso shall be inserted, namely: -

"Provided that, the age specified above shall not apply to widow or widower of the deceased Government servant, who seeks appointment under these rules. The age limit for these dependents shall not exceed fifty five years at the time of submitting application".

**6. Substitution of Rule 5.-** For Rule 5 of the said rules, the following shall be substituted, namely: -

**"5. Application for appointment. -**Every dependent of a deceased Government Servant, seeking appointment under these rules shall make an application within one year from the date of death of the Government Servant, in such form, as may be notified by the Government, from time to time, to the Head of the Department under whom the deceased Government Servant was working.

Provided that, in case of a minor he must have attained the age of eighteen years within two years from the date of death of the Government servant and he must make an application within two years thereafter."

**7. Amendment of Rule 6.-** In Rule 6, of the said rules, after sub-rule (6), the following shall be inserted, namely: -

"(7) The appointment under these rules shall be made in accordance with the provisions that are prevailing on the date of application."

By Order and in the name of the
Governor of Karnataka

(Thejavathi.N)
Under Secretary to Government
Department of Personnel and
Administrative Reforms
(Service Rules-Special Cell)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE